# ಭಾವರಾಜ್ಯದಲ್ಲಿ ಶ್ರೀಮಾತೆ

ಮಾತಾ ತ್ಯಾಗಮಯೀ

ಶ್ರೀರಾಮಕೃಷ್ಣರಲ್ಲಿ ಆಧ್ಯಾತ್ಮಿಕ ಭಾವವೈಭವಗಳು ಎದ್ದು ಕಾಣಿಸುವಂತೆ ಶ್ರೀಮಾತೆಯವರಲ್ಲಿ ಕಾಣಿಸಲಾರದು; ಆದರೂ ಕೆಲವು ಸಂದರ್ಭಗಳಲ್ಲಿ ಅವರ ಅಂತರಂಗದ ಭಕ್ತಿ, ಭಾವಗಳು ಸೂಕ್ಷ್ಮವಾಗಿ ವ್ಯಕ್ತಗೊಂಡಿವೆ. ಈ ಕುರಿತು ಬರೆಯುವ ಲೇಖಕಿ, ಚಳ್ಳಕೆರೆ ಶ್ರೀ ಶಾರದಾಶ್ರಮದ ಮುಖ್ಯಸ್ಥರು. ಉತ್ತಮ ಬರಹಗಾರರೂ, ಅನುವಾದಕರೂ, ವಾಗ್ಮಿಯೂ ಆಗಿರುವ ಅವರು ಅನೇಕ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

**ಭಾ**ವರಾಜ್ಯದಲ್ಲಿ ಶ್ರೀಮಾತೆಯವರು ಎಂಬ ವಿಷಯಕ್ಕೆ ಸಂಬಂಧಿಸಿದಂತೆ, ನಾವು ಶ್ರೀಮಾತೆಯವರ ಭಾವರಾಜ್ಯ ಎಷ್ಟು ಶ್ರೀಮಂತವಾಗಿತ್ತು, ಗಂಭೀರ ಪ್ರಕಾಶಮಾನವಾಗಿತ್ತು ಎಂಬುದನ್ನು ನಮ್ಮ ಮನೋಬುದ್ಧಿಗಳ ರಾಜ್ಯದಲ್ಲಿ ತಂದುಕೊಂಡು ಭಾವಿಸಲು ಪ್ರಯತ್ನಿಸೋಣ.

ಭಾವ ಎಂದರೇನು? ಇಂದ್ರಿಯಗಳ ರಾಜ್ಯ, ಮನೋರಾಜ್ಯ, ಬೌದ್ಧಿಕ ಲೋಕವಿರುವಂತೆ ಇಂದ್ರಿಯ ಮನ ಬುದ್ಧಿಗಳ ಆಚೆ ಆಧ್ಯಾತ್ಮಿಕ ಭಾವಗಳ ಲೋಕ ಎಂಬುದೊಂದಿದೆ. ಭಾವ ಎಂದು ಹೇಳಿದಾಗ ವ್ಯಕ್ತಿ ಒಂದು ಆಧ್ಯಾತ್ಮಿಕ ತತ್ತ್ವ, ಚಿಂತನೆ, ಭಾವನೆಯನ್ನು ದೀರ್ಘಕಾಲ ಸ್ಥಿರವಾಗಿ ಧರಿಸಬಲ್ಲ ಶಕ್ತಿ, ತನ್ಮೂಲಕ ಅನುಭವಗೋಚರವಾಗುವ, ಶಾಂತಿ ಮತ್ತು ಆತ್ಮ ಜಾಗೃತಿ ಎಂದು ಹೇಳಬಹುದು. ಭಾವದಲ್ಲಿ ಮುಖ್ಯವಾಗಿ ಇರಬೇಕಾದುದು ಪ್ರೇಮ, ತನ್ಮಯತೆ. ಶ್ರೀರಾಮಕೃಷ್ಣರು, ''ಮುಖ್ಯವಾಗಿ ಬೇಕಾದುದು ಭಾವ. ಭಾವ ಪಕ್ವವಾಯಿತೋ ಪ್ರೇಮ'' ಎನ್ನುತ್ತಾರೆ. ಶ್ರೀರಾಮಕೃಷ್ಣರು ಹೇಳುತ್ತಾರೆ, ''ಭಾವ ಪಕ್ವವಾಯಿತೋ ಪ್ರೇಮ. ಪ್ರೇಮ ಪಕ್ವವಾಯಿತೋ ಮಹಾಭಾವ. ಮಹಾಭಾವದಿಂದ ವಸ್ತುಲಾಭ.'' ನಮ್ಮೆಲ್ಲ ಸಾಧನೆ, ಸತ್ಸಂಗ, ಅಧ್ಯಯನ, ಜಪ, ಧ್ಯಾನ, ಸೇವೆ ನಮ್ಮನ್ನು ಭಾವದ ಲೋಕಕ್ಕೆ ಕರೆದುಕೊಂಡು ಹೋಗುವಂತಾಗಬೇಕು. ಭಾವಪ್ರಾಪ್ತಿಯಾಯಿತೋ ಪರಮಾನಂದ, ದುಃಖಸ್ಪರ್ಶವಿಲ್ಲದ ಪರಮಾನಂದ. ಶ್ರೀರಾಮಕೃಷ್ಣರು ''ಆತನನ್ನು ಸ್ಥೂಲ ಕಣ್ಣುಗಳಿಂದ ನೋಡಲಾಗುವುದಿಲ್ಲ. ಸಾಧನೆ ಮುಂದುವರಿಯುತ್ತ ಸಾಧಕನಿಗೆ ಪ್ರೇಮದ ಶರೀರ ಉಂಟಾಗುತ್ತದೆ. ಅದಕ್ಕೆ ಪ್ರೇಮದ ಕಣ್ಣು, ಪ್ರೇಮದ ಕಿವಿ ಇರುತ್ತದೆ. ಆ ಕಣ್ಣುಗಳಿಂದ ಆತ ನೋಡುತ್ತಾನೆ, ಆ ಕಿವಿಗಳಿಂದ ಭಗವಂತನ ವಾಣಿಯನ್ನು ಕೇಳುತ್ತಾನೆ'' ಎಂದು ಹೇಳಿದರು.[೧] ಆ ಪ್ರೇಮಶರೀರದಿಂದ ಭಗವಂತನೊಡನೆ ವಿಲಾಸಿಸುವುದನ್ನು ಭಾವ ಎಂದು ಕರೆಯಬಹುದು.

ಈಗ ನಾವು ಶ್ರೀಮಾತೆಯವರ ಭಾವರಾಜ್ಯದ ಗಾಂಭೀರ್ಯವನ್ನು ಪ್ರಕಾಶವನ್ನು ನಮ್ಮ ಭಾವರಾಜ್ಯದಲ್ಲಿ ತುಂಬಿಕೊಳ್ಳುವ ಪ್ರಯತ್ನ ಮಾಡೋಣ.



ಶ್ರೀಮಾತೆಯವರು ದಕ್ಷಿಣ ಕೊಲ್ಕತ್ತಾದಲ್ಲಿರುವ ಕಾಳೀಘಾಟ್ ಕಾಳೀ ದೇವಸ್ಥಾನಕ್ಕೆ ಹೋಗಿದ್ದಾರೆ. ತಾಯಿಗೆ ಪೂಜೆ ಸಲ್ಲಿಸಿ ಅವರು ಅಲ್ಲಿಂದ ಅನತಿ ದೂರದಲ್ಲಿರುವ ನಕುಲೇಶ್ವರ ಶಿವ ದೇವಸ್ಥಾನಕ್ಕೆ ಹೊರಟರು. ದಾರಿಯಲ್ಲಿ ಓರ್ವ ಭೈರವಿ ಅವರ ಎದುರಿನಿಂದ ಬಂದಳು. ಅವಳು ತ್ರಿಶೂಲ ಹಿಡಿದಿದ್ದಳು, ಗೈರಿಕವಸನ ಧರಿಸಿದ್ದಳು. ಅವಳು ಶ್ರೀಮಾತೆಯವರ ಶ್ರೀಮುಖವನ್ನು ದರ್ಶಿಸಿ ಯಾವುದೋ ಅವ್ಯಕ್ತ ಪ್ರೇರಣೆಯಿಂದ ಪ್ರಚೋದಿತಳಾಗಿ ಗಿರೀಶ ಘೋಷ್ ರಚಿಸಿದ ಆಗಮನಿ ಭಜನೆ ಹಾಡತೊಡಗಿದಳು. ಆ ಭಜನೆಯ ಭಾವದ ಹಿನ್ನೆಲೆಯಲ್ಲಿ ಶ್ರೀಮಾತೆಯವರು ನಿಂತಲ್ಲಿಯೇ ಸ್ಥಿರರಾದರು. ಅವರ ಭಾವ ಗಾಢವಾಯಿತು, ಆಳವಾಯಿತು, ಭಾವ ಸಮಾಧಿಲೀನರಾದರು. ಭೈರವಿಯ ಭಜನೆ ಕೇಳಲು ಯಾತ್ರಿಗಳು ಸುತ್ತುವರಿದರು. ಭಜನೆ ಮುಗಿದ ಮೇಲೆ ಶ್ರೀಮಾತೆಯವರು ಶಿಷ್ಯ ಆಶುತೋಷನಿಗೆ ಭೈರವಿಗೆ ದಕ್ಷಿಣೆ ನೀಡಲು ಹೇಳಿದರು. ಭೈರವಿ, ''ಅಮ್ಮ ನಿಮ್ಮಿಂದ ನಾನು ಏನನ್ನು ಪಡೆದುಕೊಳ್ಳಬೇಕೋ ಅದನ್ನು ಪಡೆಯುತ್ತೇನೆ'' ಎಂದಳು. ಶ್ರೀಮಾತೆಯವರಿಂದ ಜ್ಞಾನ, ಭಕ್ತಿ, ಮೋಕ್ಷಗಳನ್ನು ಪಡೆಯಬೇಕೇ ಹೊರತು ಅನ್ಯಕ್ಷುಲ್ಲಕ ವಸ್ತುಗಳನ್ನಲ್ಲ ಎಂಬುದು ಅವಳ ಭಾವವಿರಬಹುದು. ಶ್ರೀಮಾತೆಯವರು ಮುಂದೆ ಹೆಜ್ಜೆಯಿಟ್ಟರು. ಅವಳು ಬಾಗಿ ಶ್ರೀಮಾತೆಯವರ ಪಾದಧೂಳಿಯನ್ನು ತೆಗೆದುಕೊಂಡು ತನ್ನ ಶಿರದಲ್ಲಿ ಧರಿಸಿ, ತನ್ನ ದಾರಿಯಲ್ಲಿ ಮುಂದುವರಿದಳು.

ಶ್ರೀಮಾತೆಯವರು ನಕುಲೇಶ್ವರ ಶಿವನ ಗುಡಿ ತಲುಪಿದರು. ಅವರು ದೇಗುಲದೊಳಗೆ ಹೋಗಲಿಲ್ಲ. ತಮ್ಮೊಡನೆ ಇದ್ದ ರಾಧಿ, ಸುರಬಾಲೆ, ನಳಿನಿ ಮತ್ತು ಗೋಲಾಪ್ ಮಾರಿಗೆ ದೇವಸ್ಥಾನದೊಳಗೆ ಹೋಗಿ ಬರುವಂತೆ ಸನ್ನೆ ಮಾಡಿ, ತಾವು ದೇವಸ್ಥಾನದ ಕಟ್ಟೆಯ ಮೇಲೇ ಕುಳಿತರು. ಗಾಢ ಅಂತರ್ಮುಖ ಭಾವ ಅವ

---

೧ ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪುಟ ೬೧

ರನ್ನು ಆವರಿಸಿತು. ಮಾತು ಮೌನವಾಯಿತು. ಸಾಂತ ಅನಂತ ವಾಯಿತು, ಅಲ್ಪ ಭೂಮವಾಯಿತು. ನದಿ ಬ್ರಹ್ಮಸಾಗರ ಸೇರಿ ತನ್ನ ನಾಮರೂಪಗಳನ್ನು ಕಳೆದುಕೊಂಡು ಪರಬ್ರಹ್ಮ ಸಾಗರದ ಧರ್ಮವನ್ನು ತನ್ನದಾಗಿಸಿಕೊಂಡಿತು. ದೇಹ ಮರೆತು ಹೋಯಿತು, ಜಗತ್ತು ಮರೆತುಹೋಯಿತು. ದೇಗುಲದಿಂದ ಮರಳಿದ ಗೋಲಾಪ್ ಮಾ ಹಲವು ಬಾರಿ ಕರೆದರೂ ಅವರಿಗೆ ಕೇಳಿಸಲೇ ಇಲ್ಲ. 'ಉದ್ಬೋಧನ' ತಲುಪಿದ ಮೇಲೂ ಮೌನ ವಾಗಿಯೇ ಇದ್ದರು. ಬಹುಹೊತ್ತಿನ ಬಳಿಕ "ಆ ಭೈರವಿ ಯಾರು?" ಎಂದು ಪ್ರಶ್ನಿಸಿದರು. ಶಿಷ್ಯ ಆಶುತೋಷ ಮಿತ್ರ "ಬಹುಶಃ ಅವಳು ಗಿರೀಶನ ಥಿಯೇಟರಿನ ಸಂಪರ್ಕದಲ್ಲಿ ದ್ದವಳು, ಈಗ ಸಂನ್ಯಾಸಿನಿಯಾಗಿದ್ದಾಳೆ" ಎಂದರು. "ಹಾಗೇನು?" ಎನ್ನುತ್ತ ಶ್ರೀಮಾತೆಯವರು ಮತ್ತೆ ಗಂಭೀರ ಮೌನದಲ್ಲಿ ಲಯ ವಾದರು.[೨] ಮುಖ್ಯವಾಗಿ ಬೇಕಾದುದು ಭಾವ, ಭಾವ ಪಕ್ವ ವಾಯಿತೋ ಪ್ರೇಮ.

ಗಿರೀಶನ ಥಿಯೇಟರಿನ ಅನೇಕ ನಟಿಯರು ಶ್ರೀಮಾತೆ ಯವರ ದರ್ಶನಕ್ಕೆ ಆಗಾಗ ಬಂದುಹೋಗುತ್ತಿದ್ದರು. ಅವರಲ್ಲಿ ಖ್ಯಾತ ನಟಿ ತೀನ್‌ಕಾರಿ ಒಬ್ಬಳು. ಅಂದು ಅವಳು 'ಉದ್ಬೋಧನ'ಕ್ಕೆ ಬಂದಿದ್ದಾಳೆ. ಲಕ್ಷ್ಮೀದೀದಿ ಅವಳಿಗೆ ಒಂದು ಭಜನೆ ಹಾಡಲು ಹೇಳಿದರು. ಅವಳು ಸಂಕೋಚದಿಂದಲೇ "ನಾನು ಯಾವ ಭಜನೆ ಹಾಡಲಿ?" ಎಂದು ಕೇಳಿದಳು. ಶ್ರೀಮಾತೆಯವರು "ನೀನು 'ಬಿಲ್ವಮಂಗಳ' ನಾಟಕದಲ್ಲಿ ಪಾಗಲಿನಿಯ ಪಾತ್ರದಲ್ಲಿ ಹಾಡಿದ ಹಾಡು ಹೇಳು, ಅದ್ಭುತವಾಗಿರುತ್ತದೆ" ಎಂದರು. ಶ್ರೀಮಾತೆ ಯವರು ಆ ನಾಟಕ ನೋಡಿದ್ದರು. ಅವಳು 'ಉದ್ಬೋಧನ' ಮೊದಲ ಮಹಡಿಯಲ್ಲಿರುವ ಶ್ರೀಮಾತೆಯವರ ಕೋಣೆಯ ಎದುರಿನ ವರಾಂಡದಲ್ಲಿ ಕುಳಿತು ಹಾಡು ಆರಂಭಿಸಿದಳು.

**'ಕೃಷ್ಣ ನನ್ನ ಕೈ ಹಿಡಿದು ಸಂಚರಿಸುತಿಹನು**
**ನಾನು ಹೋದಡೆಯಲ್ಲೆಲ್ಲ ನನ್ನ ಜೊತೆ'**

ಅದು ಬೆಳಗ್ಗೆ ೯-೩೦ರ ಸಮಯ. ಎಲ್ಲರೂ ತಮ್ಮ ತಮ್ಮ ಕೆಲಸಕಾರ್ಯಗಳಲ್ಲಿ ವ್ಯಸ್ತರಾಗಿದ್ದಾರೆ. ತೀನ್‌ಕಾರಿ ಹಾಡು ಪ್ರಾರಂ ಭಿಸಲಿಕ್ಕಿಲ್ಲ - ಮಧುರ ಧ್ವನಿ, ಉಚ್ಚ ಕಂಠ, ಗಂಭೀರಲಯ, ಭಕ್ತಿ ಭಾವದಿಂದ ಕೂಡಿದ ಭಜನೆಯ ಧ್ವನಿಗೆ ಪ್ರತಿಯೊಬ್ಬರೂ ತಮ್ಮ ತಮ್ಮ ಕೆಲಸಗಳನ್ನು ಅಲ್ಲಿಯೇ ನಿಲ್ಲಿಸಿ ಭಜನೆ ಕೇಳಲು ಧಾವಿಸಿ ಬಂದರು. ಸ್ವಾಮಿ ಶಾರದಾನಂದರು ತಮ್ಮ ಕೋಣೆಯಲ್ಲಿ ಕುಳಿತು ಬರೆಯುತ್ತಿದ್ದರು. ಅವರು ಲೇಖನಿಯನ್ನು ಅಲ್ಲಿಯೇ ಇಟ್ಟು ಸ್ಥಿರರಾದರು, ಭಜನೆಯ ಭಾವದಲ್ಲಿ ತಲ್ಲೀನರಾದರು. ತರಕಾರಿ ಹೆಚ್ಚುತ್ತಿದ್ದ ಯೋಗಿನ್ ಮಾ ಕೆಲಸವನ್ನು ಅಲ್ಲಿಯೇ ನಿಲ್ಲಿಸಿ ವರಾಂಡಕ್ಕೆ ಹೋದಳು.

ಶ್ರೀಮಾತೆಯವರು ಆಗ ತಾನೇ ಶ್ರೀರಾಮಕೃಷ್ಣರ ಪೂಜೆ ಮುಗಿಸಿದ್ದರು. ಅವರು ನೆಲದಲ್ಲಿ ಅದೇ ಆಸನದ ಮೇಲೆ ಕುಳಿತು ಭಜನೆ ಕೇಳುತ್ತಿದ್ದಾರೆ. ತೀನ್‌ಕಾರಿಯ ಮಧುರ ಭಾವ ಪೂರ್ಣ ಭಜನೆ ಇಡೀ 'ಉದ್ಬೋಧನ'ವನ್ನು ನಿಶ್ಶಬ್ದಗೊಳಿಸಿತು, ನಿಸ್ತಬ್ಧ ಗೊಳಿಸಿತು. ಪ್ರತಿಯೊಬ್ಬರೂ ಹಾಡಿನ ಭಾವದಲ್ಲಿ ಮಗ್ನರಾದರು.

**'ಪ್ರೇಮದಿಂದ ನನ್ನ ಮುಖವ ತೀಡುತ**
**ನನ್ನ ದೃಷ್ಟಿಯಲ್ಲಿ ದೃಷ್ಟಿಯನ್ನು ಸೇರಿಸಿ**
**ನನ್ನ ಹಾಸದೊಡನೆ ತನ್ನ ಮಂದಹಾಸವ ಸೇರಿಸಿ**
**ಜತನದಿಂದ ನನ್ನ ಕಾಪಾಡುತಿಹನು.'**

ಶ್ರೀಮಾತೆಯವರು ಭಜನೆ ಕೇಳುತ್ತ ಶ್ರೀರಾಮಕೃಷ್ಣರನ್ನೇ ನೋಡುತ್ತಿದ್ದರು. ಹಾಗೆಯೇ ಕಣ್ಣುಮುಚ್ಚಿದರು. ಸ್ವಲ್ಪ ಹೊತ್ತಿಗೆ ಕಣ್ಣು ತೆರೆದರೂ ಹಕ್ಕಿ ಮೊಟ್ಟೆಗಳಿಗೆ ಕಾವು ಕೊಡಲು ಕುಳಿತ ದೃಷ್ಟಿಯಂತೆ ಅವರ ಕಂಗಳು ಒಳಮುಖವಾಗಿದ್ದವು. ಹಾಡು ಮುಕ್ತಾಯವಾಗಲು ಬಂದಾಗ ಶ್ರೀಮಾತೆಯವರು "ಆಹಾ! ಆಹಾ!" ಎಂದರು. ಮತ್ತೆ ಅದೇ ಗಾಢ ಭಾವಸಮಾಧಿ! ಅಲ್ಪ ಭೂಮವಾಯಿತು. ಸಾಂತ ಅನಂತವಾಯಿತು. ಒಂದು ಗಂಭೀರ ಮೌನ ಎಲ್ಲೆಡೆ ತುಂಬಿಕೊಂಡಿತು. ಕೊನೆಗೆ ಶ್ರೀಮಾತೆಯವರು ಪ್ರೇಮಾಶ್ರುಗಳನ್ನು ಒರಸುತ್ತ, "ಹಾ ಮಗು, ನೀನು ಇಂದು ಎಷ್ಟು ಸುಂದರ ಭಜನೆಯನ್ನು ಹಾಡಿದೆ!" ಎಂದರು.[೩] ಶ್ರೀರಾಮಕೃಷ್ಣರು ಹೇಳುವಂತೆ, "ಮುಖ್ಯವಾಗಿ ಬೇಕಾದುದು ಭಾವ. ಭಾವ ಪಕ್ವವಾಯಿತೋ ಪ್ರೇಮ".

ಪ್ರತಿ ವರ್ಷ ದುರ್ಗಾಪೂಜೆಯ ಮುನ್ನ ಬಾವುಲ್‌ಗಳು ಬಂಗಾಳದಲ್ಲಿ ಮನೆಯಿಂದ ಮನೆಗೆ ಹೋಗುತ್ತ ಆಗಮನಿ ಹಾಡುಗಳನ್ನು ಹಾಡುತ್ತಾರೆ. ಆಗಮನಿಯು ಶಿವಪಾರ್ವತಿ ಯವರು ಮತ್ತು ದುರ್ಗಾಪೂಜೆಗೆ ಸಂಬಂಧಿಸಿದ ಕಥೆಗಳನ್ನು ಒಳಗೊಂಡ ಭಕ್ತಿಭಾವಪ್ರಧಾನ ಭಜನೆಗಳು. ಸತಿ ತಪಸ್ಸು ಮಾಡಿ ಶಿವನನ್ನು ವರಿಸಿ ಅವನೊಡನೆ ಕೈಲಾಸಕ್ಕೆ ಹೋದಳು. ಅವಳ ತಾಯಿ ಮೈನಾದೇವಿಗೆ ತನ್ನ ಮಗಳು ಭಿಕ್ಷುಕನೊಡನೆ ಹೇಗೆ ಸಂಸಾರ ನಡೆಸುತ್ತಿದ್ದಾಳೆ ಎಂದು ಚಿಂತೆಯಾಯಿತು. ತನ್ನ ಮುದ್ದುಮಗಳನ್ನು ಕರೆತರುವಂತೆ ಪತಿ ಹಿಮವಂತನನ್ನು ಒತ್ತಾ ಯಿಸಿದಳು. ಹಿಮವಂತ ಉಮೆಯನ್ನು ತನ್ನ ಮನೆಗೆ ಕರೆ ತಂದನು. ಆದರೆ ಅವಳು ಮೂರು ದಿನ ಮಾತ್ರ ಇದ್ದಳು. ಅವು ಗಳೇ ದುರ್ಗಾಪೂಜೆಯ ದಿನಗಳು. ಅವಳು ತವರುಮನೆಗೆ ಆಗಮಿಸಿದ ದಿನಗಳ ದೃಶ್ಯಗಳನ್ನು ಆಗಮನಿ ಭಜನೆಗಳು ಒಳ ಗೊಂಡಿವೆ.

ಒಮ್ಮೆ ಒಬ್ಬ ಬಾವುಲ್ ಶ್ರೀಮಾತೆಯವರ ಮನೆಗೆ ಬಂದಿ ದ್ದಾನೆ. ಅವನು ಜಯರಾಮಬಾಟಿಯ ಹೊಸ ಮನೆಯ ಅಂಗಳದ ದ್ವಾರದ ಬಳಿ ಕುಳಿತು ಹಾಡುತ್ತಿದ್ದಾನೆ. ಶ್ರೀಮಾತೆ

೨ Sri Sharada Devi & Her Divine Play, p.584

೩ Sri Sarada Devi & Her Devine Play Page - 582

ಯವರು ತಮ್ಮ ಕೊಠಡಿಯ ಬಾಗಿಲಲ್ಲಿ ಕುಳಿತು ತನ್ಮಯಚಿತ್ತರಾಗಿ ಭಜನೆ ಆಲಿಸುತ್ತಿದ್ದಾರೆ. ಹಾಡು ಮುಗಿದರೂ ಶ್ರೀಮಾತೆಯವರು ಹಾಗೆಯೇ ಸ್ಥಿರವಾಗಿದ್ದಾರೆ. ಬಾವುಲ್ ದಕ್ಷಿಣೆ ಕೇಳಿದ. ಶ್ರೀಮಾತೆಯವರ ಕಡೆಯಿಂದ ಉತ್ತರವೇ ಇಲ್ಲ. ನದಿ ಸಾಗರದಲ್ಲಿ ಲೀನವಾಗಿದೆ. ಸಾಂತ ಅನಂತವಾಗಿದೆ. ಇಂದ್ರಿಯ ಲೋಕದ ವ್ಯವಹಾರಗಳು ಅಲ್ಲಿಯವರೆಗೆ ತಲುಪಬಲ್ಲುವೇನು? ಆಶು ಬಾವುಲ್‌ನಿಗೆ ನಾಲ್ಕು ಪೈಸೆ ಕೊಟ್ಟನು. ಅವನು ಹೊರಟುಹೋದನು. ಹತ್ತು ನಿಮಿಷಗಳು ಉರುಳಿದವು. ಆದರೂ ಶ್ರೀಮಾತೆಯವರು ಹಾಗೆಯೇ ಸ್ಥಿರವಾಗಿದ್ದಾರೆ. ಆಶು ಅವರಿಗೆ ಕೋಣೆಯೊಳಗೆ ಹೋಗುವಂತೆ ವಿನಂತಿಸಿದ. ಶ್ರೀಮಾತೆಯವರ ಕಡೆಯಿಂದ ಉತ್ತರವಿಲ್ಲ. ೨ನೆಯ ಬಾರಿ ಅವನು ಹೇಳಿದಾಗ, ''ನಡೆ ಹೋಗೋಣ. ಎಲ್ಲ ನೀರಸವೆನಿಸುತ್ತಿದೆ'' ಎಂದರು. ಅವರು ನಿಧಾನವಾಗಿ ಎದ್ದು ಹೋಗಿ ತಮ್ಮ ಕೋಣೆಯೊಳಗೆ ಕುಳಿತು, ಮತ್ತೆ ''ಇನ್ನೆಷ್ಟು ದಿನಗಳನ್ನು ಕಳೆಯಬೇಕು?'' ಎಂದು ಉದ್ಗರಿಸಿದರು. ಕ್ರಮೇಣ ಅವರು ಬಹಿರ್ಮುಖರಾದರು. ಎಣ್ಣೆ ಮಾಲಿಷ್ ಮಾಡಿ, ಸ್ನಾನಕ್ಕೆ ಹೊರಟರು. ಅಂದು ಅವರಿಗೆ ತಮ್ಮ ಸ್ವಸ್ವರೂಪದ ಸ್ಮರಣೆಯಾಗಿರಬೇಕು.[೪]

ಅದು ೧೯೧೪ರ ಅಕ್ಟೋಬರ್ ನವೆಂಬರ್ ತಿಂಗಳು. ಅಂದು 'ಉದ್ಬೋಧನ'ದಲ್ಲಿ ಕಾಳೀಕೀರ್ತನೆ ನಡೆಯಲಿತ್ತು. ಬೇಲೂರು ಮಠದಿಂದ ಸಾಧುಗಳು ಆಗಮಿಸಿದ್ದರು. ರಾತ್ರಿ ೮–೩೦ಕ್ಕೆ ಭಜನೆ ಆರಂಭವಾಯಿತು. ಕೀರ್ತನೆ ಕೇಳಲು ಅನೇಕ ಹೆಣ್ಣುಮಕ್ಕಳು ವರಾಂಡದಲ್ಲಿ ಸೇರಿದ್ದರು. ಸರಯೂಬಾಲಾದೇವಿ ಶ್ರೀಮಾತೆಯವರ ಪಾದಗಳಿಗೆ ಎಣ್ಣೆ ಹಚ್ಚಿ ಮಾಲೀಷು ಮಾಡುತ್ತಿದ್ದಳು. ಅಲ್ಲಿಗೂ ಈ ಹಾಡುಗಳು ಚೆನ್ನಾಗಿ ಕೇಳುತ್ತಿದ್ದವು. ಈ ಹಾಡುಗಳನ್ನು ಹಲವು ಬಾರಿ ಕೇಳಿದ್ದರೂ ಈ ಸಲ ಅವು ಎಷ್ಟೊಂದು ಭಾವಪೂರ್ಣವಾಗಿದ್ದವು! ಸರಯೂಬಾಲಾರ ಕಣ್ಣುಗಳು ಹನಿಗೂಡಿದವು. ನಡುನಡುವೆ ಶ್ರೀಮಾತೆಯವರು ಉತ್ಸಾಹದಿಂದ, ''ಓ, ಈ ಹಾಡನ್ನು ಶ್ರೀರಾಮಕೃಷ್ಣರು ಹಾಡುತ್ತಿದ್ದರು'' ಎನ್ನುತ್ತಿದ್ದರು. ಅನಂತರ ''ಮಜಲೋ ಆಮಾರ್ ಮನ ಭ್ರಮರಾ, ಶ್ಯಾಮಾಪದ ನೀಲಕಮಲೇ''(ಸಾಗುತಿಹುದು ಚಿತ್ತಭೃಂಗ) ಹಾಡು ಆರಂಭವಾದಾಗ ಶ್ರೀಮಾತೆಯರಿಗೆ ಇನ್ನು ಮಲಗಿರಲಾಗಲಿಲ್ಲ. ಅವರ ಕಣ್ಣುಗಳು ಹನಿಗೂಡಿದವು. ಅವರು ಎದ್ದು ಕುಳಿತು ''ನಡೆ, ವರಾಂಡಕ್ಕೆ ಹೋಗಿ ಕೇಳೋಣ'' ಎಂದರು. ಕೀರ್ತನೆ ಮುಗಿಯುವವರೆಗೂ ಅವರು ಕೀರ್ತನೆಯ ಭಾವದಲ್ಲೇ ತನ್ಮಯರಾಗಿದ್ದರು.[೫]

ಶ್ರೀಮಾತೆಯವರು ಜಯರಾಮಬಾಟಿಯಲ್ಲಿದ್ದಾರೆ. ಸಾಯಂಕಾಲವಾಯಿತು. ಸ್ವಾಮಿ ಶಾರದೇಶಾನಂದಜಿಯವರು ಬರೆಯುವಂತೆ ಶ್ರೀಮಾತೆಯವರು ಅದಾಗಲೇ ತಾವೇ ಹೆಚ್ಚು ಹೊತ್ತು ಚಪಾತಿ ಹಿಟ್ಟನ್ನು ನಾದಿ ಚಪಾತಿ ಲಟ್ಟಿಸಿದರು. ಅವನ್ನು ಶ್ರೀರಾಮಕೃಷ್ಣರಿಗೆ ಅರ್ಪಿಸಿದರು. ಬಳಿಕ ಅದನ್ನು ಭದ್ರವಾದ ಪಾತ್ರೆಯಲ್ಲಿ ಮುಚ್ಚಿಟ್ಟರು. ತಮ್ಮ ಮಕ್ಕಳು ಜಪಧ್ಯಾನ ಮುಗಿಸಿ ಊಟಕ್ಕೆ ತಡವಾಗಿ ಬರಲಿದ್ದಾರೆ. ಆಗ ಚಪಾತಿ ಆರಬಾರದು ಎಂಬುದು ಶ್ರೀಮಾತೆಯವರ ಭಾವ. ಅವರ ಪ್ರತಿಯೊಂದು ವರ್ತನೆಯಲ್ಲಿ ಪ್ರೇಮ ತೊಟ್ಟಿಕ್ಕುತ್ತಿದೆ. ಇಗ ಶ್ರೀಮಾತೆಯವರು ತಮ್ಮ ಕೋಣೆಗೆ ಬಂದು ಶ್ರೀರಾಮಕೃಷ್ಣರ ಸನ್ನಿಧಿಯಲ್ಲಿ ದೀಪ ಬೆಳಗಿಸಿದರು. ಎಲ್ಲ ಮಾತುಗಳು ನಿಂತವು. ಎಲ್ಲ ಕೆಲಸಕಾರ್ಯಗಳನ್ನು ನಿಲ್ಲಿಸಲಾಯಿತು. ಆಗಸದಲ್ಲಿ ನೂರು ತಾರೆಗಳು ಒಂದೊಂದಾಗಿ ಮಿನುಗತೊಡಗಿದವು. ಎಲ್ಲ ಸಾಧುಬ್ರಹ್ಮಚಾರಿಗಳು ಜಪಧ್ಯಾನಕ್ಕೆ ಕುಳಿತರು. ಶ್ರೀಮಾತೆಯವರು ಧೂಪವನ್ನು ಹೊತ್ತಿಸಿದರು. ಒಂದು ಗಂಭೀರ ಮೌನ ಎಲ್ಲ ಕಡೆ ತಾನಾಗಿ ಪಸರಿಸಿತು. ಶ್ರೀಮಾತೆಯವರು ಶ್ರೀರಾಮಕೃಷ್ಣರಿಗೆ ಪ್ರಣಾಮ ಸಲ್ಲಿಸಿ, ದೀಪದ ಕುಡಿಯನ್ನು ಕಿರಿದಾಗಿಸಿ ಒಂದು ಮೂಲೆಯಲ್ಲಿ ಕಾಲು ಚಾಚಿ ಕುಳಿತರು. ಆಗ ಅವರ ಮನಸ್ಸು ಯಾವ ಭಾವಗಳ ಲೋಕದಲ್ಲಿ ವಿಹರಿಸುತ್ತಿತ್ತೋ![೬]

ಶ್ರೀಮಾತೆಯವರು ಭಜನೆಗಳನ್ನು ಆಲಿಸುವಾಗಲೇ ಭಾವಲೋಕಕ್ಕೆ ಹೋಗುತ್ತಿದ್ದರೆಂದರೆ ಇನ್ನು ಜಪ ಧ್ಯಾನ ಅಥವಾ ತಮ್ಮಲ್ಲಿ ತಾವು ಮುಳುಗಿರುವಾಗ ಕೇಳಬೇಕೆ? ಮಾತ್ರವಲ್ಲ, ಅವರು ದೈನಂದಿನ ಜೀವನದ ಸಣ್ಣ ಸಣ್ಣ ಘಟನೆಗಳಲ್ಲೂ ಮಾತು ಮನಂಗಳತ್ತತ್ತದ ಭಾವಲೋಕವನ್ನು ಪ್ರವೇಶಿಸಿಬಿಡುತ್ತಿದ್ದರು. ''ನಾನು ಎಷ್ಟೊಂದು ಕೈಗಳಿಂದ ಕಸ ಗುಡಿಸುತ್ತಿದ್ದೇನೆ. ಆದರೂ ಗುಡಿಸುವ ಕೆಲಸ ಮುಗಿಯುತ್ತಿಲ್ಲವಲ್ಲ'' ಎಂದು ಕಸ ಗುಡಿಸುವಾಗ ಹೇಳುತ್ತಲೇ ಭಾವಗಳ ಲೋಕವನ್ನು ಸೇರಿದರು. ಅಡುಗೆ ಮನೆಯಲ್ಲಿ ಯಾವುದೋ ಸಾಮಾನ್ಯ ಕೆಲಸ ಮಾಡುವಾಗ ರಾಸಬಿಹಾರಿ ಬ್ರಹ್ಮಚಾರಿಗಳು, ''ಅಮ್ಮ, ನಿಮಗೆ ಸ್ವಸ್ವರೂಪದ ನೆನಪು ಯಾವಾಗಲೂ ಇರುತ್ತದೆಯೆ?'' ಎಂದು ಪ್ರಶ್ನಿಸಲು ಶ್ರೀಮಾತೆಯವರು, ''ನಾನು ವೈಕುಂಠದಲ್ಲಿ ಅವನೊಂದಿಗೆ ಇರಬೇಕಾದವಳು. ಇದೆಲ್ಲ ಮಾಯೆಯಲ್ಲದೆ ಮತ್ತೇನು?'' ಎಂದು ಉದ್ಗರಿಸಬೇಕಾದರೆ ಅವರ ಮನಸ್ಸು ಯಾವಾಗೆಂದರೆ ಆವಾಗ ಭಾವಲೋಕಕ್ಕೆ ಧಾವಿಸುತ್ತಿತ್ತು ಎಂಬುದನ್ನು ಗುರುತಿಸಬಹುದು.

ಹಗಲು ರಾತ್ರಿ ಇಂದ್ರಿಯಗಳ ರಾಜ್ಯದಲ್ಲಿಯೇ ವ್ಯಸ್ತರೂ ಅನುರಕ್ತರೂ ಆಗಿರುವ ನಾವು ಶ್ರೀಮಾತೆಯವರ ಭಾವರಾಜ್ಯವನ್ನು ಭಾವಿಸುತ್ತಾ ಧ್ಯಾನಿಸುತ್ತಾ ನಮ್ಮ ಮನಬುದ್ಧಿಗಳನ್ನು ಪವಿತ್ರಗೊಳಿಸುವುದರೊಂದಿಗೆ ಭಾವರಾಜ್ಯವನ್ನು ಪ್ರವೇಶಿಸಲು ಬೇಕಾದ ಪಾತ್ರತೆಯನ್ನು ಪಡೆಯುವಂತಾಗಲಿ ಎಂದು ಶ್ರೀಮಾತೆಯವರ ಪದತಲದಲ್ಲಿ ಪ್ರಾರ್ಥಿಸೋಣ. ❃

---

೪ Sri Sarada Devi & Her Devine Play p.540

೫. ಶ್ರೀಶಾರದಾದೇವಿ ವಚನವೇದ, ಪು. ೫೫

೬ Reminiscences of Holy Mother, p.30